**ಅವಳ ಕಣ್ಣೀರು ಬಿತ್ತನೆಯ ಸಮಯದಲ್ಲಿ ಕೂರಿಗೆಯ ಒಳಗಿಂದ ಸರಸರನೆ ಸಾಲಿನೊಳಗೆ ಇಳಿವ ರಾಗಿ ಕಾಳಿನಂತೆ, ಕೋಡಿ ಕಿತ್ತ ನೀರಿನಂತೆ ಸುರಿದೇ ಸುರಿದಿದ್ದವು.**

# ಗಂಗಮಾಳಕ್ಕ

■ ದಯಾ ಗಂಗನಘಟ್ಟ

ರಾತ್ರಿಯೆಲ್ಲಾ ನಿದ್ದೆಯಿಲ್ಲದೇ ಹಾಸಿಗೆಯ ಮೇಲೆ ಅತ್ತಿತ್ತ ಒದ್ದಾಡುತ್ತಿದ್ದ ಗಂಗಮಾಳಮ್ಮ ಒತ್ನಂತೆ ಎದ್ದವಳೇ ಮೊಮ್ಮಗನನ್ನು ಕರೆದು 'ಏ ಸೋನೂ ಬಾರವ್ವಾ ಇಲ್ಲಿ ವಸಿ, ನಿಮ್ ಅತ್ತೆಗ್ ಒಂದ್ ಪೋನಚ್ಕೊಡು, ಅದೇನ್ ಇನ್ನಾ ಎದ್ದವ್ಳೋ ಎಂಗೋ ಕಾಣೆ. ಇವತ್ತು ಮಗಿನ ಕರ್ಕಂಡೋಗಿ ನವಿಲೆ ನಾಗಪ್ಪುಂಗೆ ಮಂಡೆ ಕೊಟ್ಕ ಬಾ ಅಂದಿದ್ದೆ, ಮನೆ ಸೀಟವ್ಳೋ ಇಲ್ವೋ, ದ್ಯಾವ್ರು ದಿಂಡ್ರು ಬಯ್ವೋ ಇಲ್ಲ ಅವ್ಳ್ಗೆ, ನಾ ಪೋನ್ ಮಾಡ್ನಿಲ್ಲ ಅಂದ್ರೆ ಎದ್ದೋಳದೂ ಇಲ್ಲ, ಬಾಗ್ಲುನೂ ಸಾರ್ಸಲ್ಲ, ನೀರುಯ್ಕಳದೂ ಇಲ್ಲ. ಅಷ್ನಂತರ್ ಮನೆ ಹೆಣ್ಮಕ್ಳು ಬುದ್ದಿ ಒಂದಾರ ಇದ್ರಲ್ವಾ' ಅಂತ ಒಂದೇ ಸಮ ಎತ್ತು ಗಂಜ್ಲ ಊದಂಗೆ ಒದ್ರಕ್ ಶುರುಮಾಡಿದ್ಲು.

ಅಜ್ಜಿಯ ಮಾತಿಗೆ ಮೊಮ್ಮಗನ ಕಡೆಯಿಂದ ಯಾವ ಪ್ರತಿಕ್ರಿಯೇನೂ ಬರ್ಲಿಲ್ಲ, ಇದು ಅವಳಲ್ಲಿ ಚಡಪಡಿಕೆಯನ್ನ ಇನ್ನಷ್ಟು ಹೆಚ್ಚುಸ್ತು. 'ಅದೇನ್ ಯಾವಾಗ್ಲೂ ಆ ಮೊಬೈಲ್ ತಿಕ್ತಾ ಕುಂತ್ಕತಿಯ ಬಾಲರ್ಾ ಅವ್ನ್ಯಾವನು' ಅಂತ ಬಯ್ಬೇಕು ಅನ್ಕೊಂಡವಳು ಮೊಮ್ಮಗ ಕೇಳಿಸಿಕೊಂಡರೆ, 'ಯಾಕೆ ಅಜ್ಜಿ, ಬ್ಯಾಡ್ ವರ್ಡ್ಸ್ ಎಲ್ಲಾ ಯೂಸ್ ಮಾಡ್ತಿರ' ಅಂತ ಅಳ್ತಾ ಕುತ್ಗಂಡ್ರೆ ಕಷ್ಟ ಅನ್ಸಿ ಹಂಗೇ ನುಂಗ್ಕಂಡ್ಳು. ನಾವು ಸಣ್ಣುಡ್ಗ್ಯಾಗಿದ್ದಾಗ ಏನಾರ ಸಣ್ದೊಂದು ತಪ್ಪಾದ್ರೂ ಅವ್ವ ನಾಯ್ಗೊಡ್ದಂಗೆ ಒಡ್ಯಳು. ಇನ್ನ ಆ ಅಪ್ಪನೋ ಸೂರಿನ ಗಳಕ್ಕೆ ಸಿಗ್ಸಿದ್ದ ಬಾರ್ಕೋಲ್ ತಗಂಡು ದನಿಗ್ ಬಾರುಸ್ದಂಗೆ ಬಾರುಸ್ತಿದ್ದ. ನಾವ್ಯಾರೂ ಕಮಕ್ ಕಿಮಕ್ ಅಂತಿರ್ಲಿಲ್ಲ. ಇನ್ನ ಬೈಯೋದಂತೂ ಶಿವಾ, ಆ ಬಯ್ಗುಳಗಳ ಹೇಳದೇ ಬೇಡ, ನಾವು ತಿಕ್ ಸೀಟ್ಕಂಡು, ಒಂದರ್ಧ ಗಂಟೇಲಿ ಎಲ್ಲಾವ್ನು ಮರ್ತ್ಗಂಡು ಮತ್ತೆ ಅದೇ ತರ್ಲೆ ಮಾಡ್ಕಂಡ್ ಸುಮ್ಕಾಯ್ತಿದ್ದೋ. ಹೊಡುಸ್ಕಳದು, ಬೈಸ್ಕಳದು ಇವ್ಯಾವೂ ಒಂದು ವಿಷ್ಯನೇ ಅಲ್ಲ ನಮ್ಗೆ. ನಮ್ಮನೇರು ಅತ್ಲಾಗಿರ್ಲಿ, ಊರಲ್ಲಿ ಯಾರು ಬೇಕಾದ್ರೂ ಯಾರ ಮಕ್ಕಳನ್ನು ಬೇಕಾದ್ರೂ ತಪ್ಪು ಅಂತ ಅನ್ಸಿದ್ರೆ ಹಿರೀಕ್ರಾಗಿ ಬೋದು ಬುದ್ಧಿ ಯೋಳ್ಬೋದಿತ್ತು. ಮಕ್ಳಿಗೆ ಅದು ಹಿಂಸೆ ಅಂತಾನೇ ಅನ್ನುಸ್ತಿರ್ಲಿಲ್ಲ. ಯಾಕಂದ್ರೆ ಪ್ರೀತಿನೂ ಹಂಗೇ ಮಾಡ್ತಿದ್ರಲ್ಲ ಆ ಜನಗಳು ಮತ್ ನಮ್ಮ ಅವ್ವ ಅಪ್ಪ, ಎಲ್ಲಾ ಮರ್ತೋಗದು. ಈಗಿನ್ ಮಕ್ಳೋ ಸರ್ ಬರ್ ಅನ್ನಂಗಿಲ್ಲ, ಮೂತಿನ ಮಂಗನ್ ತರ ಇಟ್ಕಂಡ್ ಕುತ್ಕ ಬುಡ್ತವೆ. ಅದೇನೋ ಎಮೋಸನ್ ಅಂತೆ, ಡಿಪ್ರಾಸನ್ ಅಂತೆ. ಬೊಯ್ಯದ್ ಬದ್ಕಕಲ್ವಾ, ಈಟೊಂದ್ ನಾಜೂಕಾದ್ರೆ ಎಂಗೋ ಕಾಣೆ ಅಂತ ಒಂದು ಕ್ಷಣ ಯೋಚಿಸಿದಳು. 'ಬಾಲರ್ಾ

